# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 199 |
| ಸದಸ್ಯರ ಹೆಸರು | ಶ್ರೀ ತಿಪ್ಪಣ್ಣಪ್ಪ ಕಮಕನೂರ |
| ಉತ್ತರಿಸುವ ದಿನಾಂಕ | 28.01.2026 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ಒಟ್ಟು ದೇವಸ್ಥಾನಗಳ ಸಂಖ್ಯೆ ಎಷ್ಟು; (ವರ್ಗವಾರು ಮಾಹಿತಿ ನೀಡುವುದು) | ಕಲಬುರಗಿ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ದೇವಾಲಯಗಳ ವಿವರ ಈ ಕೆಳಕಂಡಂತಿದೆ:- (see table below) |

| ಕ್ರ.ಸಂ | ಪ್ರವರ್ಗ | ಸಂಖ್ಯೆ |
|---|---|---|
| 1 | ಎ | 4 |
| 2 | ಬಿ | 2 |
| 3 | ಸಿ | 1624 |
| | ಒಟ್ಟು | 1630 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ಮತ್ತು ಅದರಲ್ಲಿ ಬಳಕೆಯಾದ ಮೊತ್ತವೆಷ್ಟು; | ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಸಾಮಾನ್ಯ ಅನುದಾನ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ ಕೆಳಗಿನಂತಿದೆ:- (see table below) |

| ಕ್ರ.ಸಂ | ಸಾಲು | ಮಂಜೂರಾದ ಅನುದಾನ | ಖರ್ಚು | ಬಾಕಿ ಇರುವ ಅನುದಾನ |
|---|---|---|---|---|
| | | | | ರೂ.ಲಕ್ಷಗಳಲ್ಲಿ |
| 1 | 2022-23 | 2702.50 | 2639.00 | 63.50 |
| 2 | 2023-24 | 391.50 | 391.50 | 0 |
| 3 | 2024-25 | 1880.94 | 1880.94 | 0 |
| | ಒಟ್ಟು | 4974.94 | 4911.44 | 63.50 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಜಿಲ್ಲೆಯ ಅನೇಕ ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿ ಯುವ ನೀರು ಶೌಚಾಲಯ ಮತ್ತು ಭಕ್ತಾದಿಗಳಿಗೆ ತಂಗುದಾಣದ ಕೊರತೆ ಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಲಬುರಗಿ ಜಿಲ್ಲೆಯ ಪ್ರವರ್ಗ "ಎ" ಮತ್ತು "ಬಿ" ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯಗಳಾದ, ಶುದ್ಧ ಕುಡಿಯುವ ನೀರು, ಶೌಚಾಲಯ ಮತ್ತು ಭಕ್ತಾದಿಗಳಿಗೆ ತಂಗುದಾಣದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.<br><br>ಸದೃಢ ಆದಾಯವಿಲ್ಲದೇ ಇರುವಂತಹ ಸಮೂಹ 'ಸಿ' ವರ್ಗದ ದೇವಾಲಯಗಳಲ್ಲಿ ಆದಾಯಕ್ಕೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ. |
| ಈ) | ಅರ್ಚಕರ ತಸ್ತೀಕ್ (Tastik) ಮೊತ್ತವನ್ನು ಹೆಚ್ಚಿಸುವ ಅಥವಾ ಸಕಾಲಕ್ಕೆ ಪಾವತಿಸುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಕರ್ನಾಟಕ (ಮತೀಯ ಮತ್ತು ಧರ್ಮಾದಾಯ) ಇನಾಂ ರದ್ದಿಯಾತಿ ಕಾಯ್ದೆ 1955ರನ್ವಯ ಧರ್ಮಾದಾಯ ಧಾರ್ಮಿಕ ಸಂಸ್ಥೆಗಳು ಹೊಂದಿದ್ದ ಇನಾಂ ಜಮೀನುಗಳು ದಿನಾಂಕ:01.07.1970 ರಿಂದ ಸರ್ಕಾರದಲ್ಲಿ ವಿಹಿತ ಗೊಂಡಿರುವುದಕ್ಕೆ ಇನಾಂ ಜಮೀನುಗಳನ್ನು ಕಳೆದುಕೊಂಡ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ ತಸ್ತೀಕ್ ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಕಂಇ/4/ಮುತಬ/2006, ದಿನಾಂಕ:29.06.2006ರಲ್ಲಿ 2006-07ರ ಸಾಲಿನಿಂದ ಜಾರಿಗೆ ಬರುವಂತೆ ವಾರ್ಷಿಕ ಕನಿಷ್ಠ ರೂ.6,000/-ಗಳ ತಸ್ತೀಕ್ ಅನ್ನು ನಿಗಧಿಪಡಿಸಲಾಗಿರುತ್ತದೆ. |

| | | |
|---|---|---|
| | | ತದನಂತರ, 2010-11ನೇ ಸಾಲಿನಲ್ಲಿ ರೂ.12,000/-ಗಳು, 2013-14ನೇ ಸಾಲಿನಲ್ಲಿ ರೂ.24,000/-ಗಳು, 2015-16ನೇ ಸಾಲಿನಲ್ಲಿ ರೂ.36,000/-ಗಳು, 2017-18ನೇ ಸಾಲಿನಲ್ಲಿ ರೂ.48,000/-ಗಳು, 2022-23ನೇ ಸಾಲಿನಲ್ಲಿ ರೂ.60,000/-ಗಳು ಹಾಗೂ 2025-26ನೇ ಸಾಲಿನಲ್ಲಿ ವಾರ್ಷಿಕ ತಸ್ತೀಕ್ ಮೊತ್ತವನ್ನು ರೂ.72,000/-ಗಳಿಗೆ ಹೆಚ್ಚಿಸಲಾಗಿರುತ್ತದೆ.<br><br>ಸರ್ಕಾರದಿಂದ ವಾರ್ಷಿಕ ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿರುವ ತಸ್ತೀಕ್ ಅನುದಾನವನ್ನು ಜಿಲ್ಲಾಧಿಕಾರಿಗಳ ಬೇಡಿಕೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಸಂಬಂಧಿಸಿದ ತಹಶೀಲ್ದಾರ್‌ರವರ ಡಿ.ಡಿ.ಓ. ಸಂಕೇತಕ್ಕೆ ಅಪ್‌ಲೋಡ್ ಮಾಡಲಾಗುತ್ತಿದೆ. ನಂತರ ಸಂಬಂಧಪಟ್ಟ ತಹಸೀಲ್ದಾರ್ ರವರು ಅನುದಾನವನ್ನು ಖಜಾನೆಯಿಂದ ಸೆಳೆದು ನೇರವಾಗಿ ಅರ್ಚಕರ/ದೇವಸ್ಥಾನದ ಬ್ಯಾಂಕ್ ಖಾತೆಗೆ ಆಯಾಯ ಆರ್ಥಿಕ ವರ್ಷದಲ್ಲಿ ಜಮೆ ಪಾವತಿಸುತ್ತಾರೆ. ಅಲ್ಲದೆ ಪ್ರಸಕ್ತ ಸಾಲಿನಿಂದ ಡಿ.ಬಿ.ಟಿ ಯೋಜನೆ ಜಾರಿಗೆ ತಂದಿದ್ದು, ಸದರಿ ಯೋಜನೆಯಡಿ ತಸ್ತೀಕ್ ಮೊತ್ತವನ್ನು ಸಕಾಲದಲ್ಲಿ ನೇರವಾಗಿ ಅರ್ಚಕರ/ದೇವಸ್ಥಾನದ ಬ್ಯಾಂಕ್ ಖಾತೆಗೆ ಪಾವತಿಸಲು ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಕಂಇ 9 ಮುಸಪ್ರ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು